

ಭಾರತದಲ್ಲಿ ಶ್ರೀಮಂತಿಕೆಯ ಕುರುಹಾದ ಚಿನ್ನಕ್ಕೆ ಅಗ್ರಸ್ಥಾನ. 'ಫೋರ್ಬ್ಸ್' ಪಟ್ಟಿಯ ಪ್ರಕಾರ, ಭಾರತ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಚಿನ್ನದ ಸಂಗ್ರಹವುಳ್ಳ ಹತ್ತು ದೇಶಗಳಲ್ಲಿ ಒಂದು.

ಭಾರತೀಯರ ಚಿನ್ನದ ಮೋಹ ವಿಶ್ವದಲ್ಲೇ ಹೆಸರುವಾಸಿ. ಹುಟ್ಟಿನಿಂದ ಸಾವಿನವರೆಗೆ ಚಿನ್ನಕ್ಕೆ ಭಾರತೀಯರ ಜೀವನದಲ್ಲಿ ಮಹತ್ವದ ಪಾತ್ರವಿದೆ. ಹಾಗೆಂದೇ ನಮ್ಮಲ್ಲಿ ಚಿನ್ನಕ್ಕೆ ಬೇಡಿಕೆ ಸದಾ ಏರುತ್ತಲೇ ಇದೆ. ನಮ್ಮಲ್ಲಿ ಉತ್ಪಾದನೆ ಇಲ್ಲದಿದ್ದರೂ ವಿದೇಶಗಳಿಂದ ಚಿನ್ನ ಆಮದಾಗುತ್ತಲೇ ಇದೆ. ಕಳೆದ ವರ್ಷವಿಡೀ ಭಾರತೀಯ ಚಿನ್ನದ ದಾಹ ಕಡಿಮೆಯಾಗಿರಲೇ ಇಲ್ಲ. ಆದರೆ ಈ ವರ್ಷದ ಆರಂಭದಲ್ಲಿ ಭಾರತೀಯರ ಚಿನ್ನದ ಬೇಡಿಕೆಗೆ ಕುತ್ತು ಬಂದಂತಿದೆ. 2018ರ ಮೊದಲ ತ್ರೈಮಾಸಿಕದಲ್ಲಿ ಭಾರತದಲ್ಲಿ ಚಿನ್ನದ ಬೇಡಿಕೆ ಶೇಕಡಾ 12ರಷ್ಟು ಕುಸಿದಿದೆ ಎಂದು ವರ್ಲ್ಡ್ ಗೋಲ್ಡ್ ಕೌನ್ಸಿಲ್ (WGC) ಪ್ರಕಟಿಸಿದೆ.

ಕಳೆದ ವರ್ಷದ ಆರಂಭದ ಮೂರು ತಿಂಗಳಲ್ಲಿ 131.1 ಟನ್‌ಗಳಷ್ಟು ಚಿನ್ನದ ಖರೀದಿ ದೇಶದಲ್ಲಿ ನಡೆದಿತ್ತು. ಆದರೆ 2018ರ ಮೊದಲ ಮೂರು ತಿಂಗಳಲ್ಲಿ 115.6 ಟನ್‌ನಷ್ಟು ಚಿನ್ನ ಮಾತ್ರ ಮಾರಾಟವಾಗಿದೆ ಎನ್ನುವುದು WGC ನೀಡಿರುವ ಅಂಕಿ ಅಂಶ. ಈ ಬೇಡಿಕೆ ಕುಸಿತಕ್ಕೆ ಮೊದಲನೆಯ ಮುಖ್ಯ ಕಾರಣ ಚಿನ್ನದ ಬೆಲೆ ಏರಿಕೆಯಾದದ್ದು. ಬೆಲೆ ಏರಿದ್ದರಿಂದ ಸಣ್ಣ ಪುಟ್ಟ ಖರೀದಿದಾರರ ಸಂಖ್ಯೆ ಕಡಿಮೆಯಾಗಿದೆ. ಜತೆಗೆ ವರ್ಷದ ಆರಂಭದಲ್ಲಿ ಮದುವೆ, ಮುಂಜಿ ಮುಂತಾದ ಶುಭದಿನಗಳ ಸಂಖ್ಯೆ ಕಡಿಮೆ ಇರುವುದು ಇನ್ನೊಂದು ಕಾರಣ. ಅದೂ ಅಲ್ಲದೆ ಕೇಂದ್ರ ಸರ್ಕಾರ ಚಿನ್ನದ ಕಸ್ಟಮ್ಸ್ ದರದ ನಿಯಂತ್ರಣಕ್ಕೆ ಹೊರಟಿದೆ ಎನ್ನುವ ಸುದ್ದಿಯೂ ಈ ಬೇಡಿಕೆ ಕುಸಿಯುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ. ಜಿಎಸ್‌ಟಿ ತೆರಿಗೆ ಜಾರಿಗೆ ಬಂದ ನಂತರ ಉಂಟಾಗಿರುವ ತೆರಿಗೆ ವಿಧಾನದ ಗೊಂದಲವೂ ಬೇಡಿಕೆ ಕುಸಿಯಲು ಮಗುದೊಂದು ಕಾರಣ ಎನ್ನಲಾಗುತ್ತಿದೆ.

ಅದೇನೇ ಇದ್ದರೂ ಈಗ ಮುಂಗಾರು ಮಳೆಯ ಶುಭಾರಂಭವಾಗಿದೆ. ಈ ಹಿನ್ನೆಲೆಯಲ್ಲಿ ದೇಶದ ಕೃಷಿ ಉತ್ಪಾದನೆಯೂ ಹೆಚ್ಚುವ ನಿರೀಕ್ಷೆ ಇದೆ. ಮಳೆಗಾಲದ ಬೆನ್ನಲ್ಲೇ ಶುಭಕಾರ್ಯಗಳ ಸಂಭ್ರಮವೂ ಮುಗಿಲಿಗೇರಲಿದೆ. ಹಾಗಾಗಿ ಚಿನ್ನದ ಒಟ್ಟಾರೆ ಬೇಡಿಕೆ ಇನ್ನಷ್ಟು ಹೆಚ್ಚುವುದು ಖಚಿತ ಎನ್ನುವುದು ಸ್ವರ್ಣೋದ್ಯಮದ ಅಂದಾಜು. ಮೊದಲ ಮೂರು ತಿಂಗಳಲ್ಲಿ 31,800 ಕೋಟಿ ರೂಪಾಯಿ ಮೌಲ್ಯದ ಚಿನ್ನ ಮಾರಾಟವಾಗಿದೆ ಎನ್ನುವುದು ಸಣ್ಣ ಮಾತೇನೂ ಅಲ್ಲ. 2018ರ ಇಡೀ ವರ್ಷದಲ್ಲಿ 700ರಿಂದ 800 ಟನ್‌ಗಳಷ್ಟು ಚಿನ್ನದ ಖರೀದಿ– ಮಾರಾಟ ನಡೆಯುವ ಅಂದಾಜನ್ನು ಉದ್ಯಮ ಈಗಾಗಲೆ ವ್ಯಕ್ತಪಡಿಸಿದೆ. ಈ ಅಂದಾಜು ನಿಜವಾಗುತ್ತದೋ ಇಲ್ಲವೋ ಎನ್ನುವುದನ್ನು ಕಾದು ನೋಡಬೇಕು.

★★★

ಇಂಗ್ಲಿಷಿನಲ್ಲಿ 'ಹೊಳೆಯೋದೆಲ್ಲಾ ಚಿನ್ನವಲ್ಲ' ಎಂಬ ಗಾದೆ ಮಾತೊಂದಿದೆ. ಅಂದರೆ ಮೇಲ್ನೋಟಕ್ಕೆ ಚಿನ್ನದಂತೆ ಹೊಳೆದರೂ, ಒಳಗಿನಿಂದ ಚಿನ್ನವಾಗಿರಲಿಕ್ಕಿಲ್ಲ; ಚಿನ್ನವಾಗಲು ಬಹಳ ಧಾರಣಾ ಶಕ್ತಿ ಬೇಕಾಗುತ್ತೆ ಎಂದದರ ಅರ್ಥ.  ಎಲ್ಲಾ ಲೋಹಗಳಿಗೂ ಚಿನ್ನಕ್ಕೆ